**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ 199/2025**

| | | |
|---|---|---|
| ಸಾಕ್ಷಿದಾರರ ಹೆಸರು | : ವಿಶ್ವ.ವಿ | **ಪಿಡಬ್ಲ್ಯೂ: 8** |
| **ತಂದೆಯ** / ಗಂಡನ ಹೆಸರು | : ವೆಂಕಟೇಗೌಡ | ಸಿಡಬ್ಲ್ಯೂ: 11 |
| ವಯಸ್ಸು | : 36 ವರ್ಷ | |
| ಉದ್ಯೋಗ | : ಆಟೋ ಚಾಲಕ | |
| ವಾಸಸ್ಥಳ | : ಶಿವಮೊಗ್ಗ | |

**ಸಾಕ್ಷಿಯನ್ನು ಈ ದಿನ ದಿಃ 26.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಹಲವು ವರ್ಷಗಳಿಂದ ಮೈಸೂರಿನಲ್ಲಿ ವಾಸಿಸುತ್ತಿದ್ದು, ಈಗ ಒಂದು ವರ್ಷದಿಂದ ಮೇಲೆ ಹೇಳಿದ ವಿಳಾಸದಲ್ಲಿ ವಾಸವಿರುತ್ತೇನೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.15.12.2022ರ ಅಮಾನತ್ತು ಮಹಜರ್ ಆಗಿದ್ದು, ಅದನ್ನು **ನಿಪಿ–10** ಎಂದು ಮೂಲ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು **ನಿಪಿ–10(ಎ)** ಎಂದು ಮೂಲ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ.

2. ಚಾಸಾ–12 ನನ್ನ ಅತ್ತೆಯ ಮಗನಾಗಬೇಕು. ದಿ.15.12.2022 ರಂದು ನಾವು ಮಂಡಿ ಪೊಲೀಸ್ ಠಾಣೆಗೆ ಹೋಗಿದ್ದು, ನಮ್ಮ ಮಾವನ ಆಟೋ ಕಳುವು ಆಗಿದ್ದು, ಆ ವಿಚಾರಕ್ಕೆ ನಾವು ಠಾಣೆಗೆ ಹೋಗಿರುತ್ತೇವೆ. ಆಗ ಪೊಲೀಸರು ಸಾಕ್ಷಿಯಾಗಿ ದಾಖಲೆಗೆ

ಸಹಿ ಹಾಕಲು ಕೇಳಿಕೊಂಡಿರುತ್ತಾರೆ. ಆಗ ಯಾವ ಕಾರಣಕ್ಕೆ ಸಹಿ ಹಾಕಬೇಕು ಎಂದು ಕೇಳಿದ್ದಾಗ ವಾಹನವನ್ನು ಬಿಡುಗಡೆ ಮಾಡಲು ಸಹಿ ಮಾಡಿ ಎಂದು ಕೇಳಿದ್ದು, ಆಗ ದಾಖಲೆಗೆ ಸಹಿ ಮಾಡಿರುತ್ತೇನೆ. ಠಾಣೆಯಲ್ಲಿ ನಮ್ಮ ವಾಹನದ ಕೀಯನ್ನು ಪಡೆಯುವ ಕಾಲಕ್ಕೆ ಅಲ್ಲಿ ಒಬ್ಬ ವ್ಯಕ್ತಿ ಇದ್ದು, ಆತ ಬಟ್ಟೆಯನ್ನು ಬದಲಾಯಿಸುತ್ತಿದ್ದು, ಆಗ ಕೂಡಾ ಒಂದು ಸಹಿಯನ್ನು ಪಡೆದುಕೊಂಡಿರುತ್ತಾರೆ. ನಾನು ವಿಚಾರಿಸಿದಾಗ ಸದರಿ ಬಟ್ಟೆಗಳನ್ನು ಬದಲಾಯಿಸಿ ಪಡೆದುಕೊಂಡರು. ಸದರಿ ಬಟ್ಟೆಗೆ ರಕ್ತದ ಕಲೆಯಾಗಿದೆ ಎಂದು ತೆಗೆದುಕೊಂಡು ದಾಖಲೆಗೆ ಸಹಿ ಪಡೆದು ಬಟ್ಟೆ ಬದಲಾಯಿಸಿದ ವ್ಯಕ್ತಿಯ ಜೊತೆ ಪೋಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಎರಡು ಪೋಟೋಗಳನ್ನು **ನಿಪಿ-11** ಎಂದು ಮೂಲ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ. ಸದರಿ ಪೋಟೋಗಳಲ್ಲಿ ನಾನು ಇದ್ದ, ಪೋಟೋದಲ್ಲಿ ಇದ್ದ ವ್ಯಕ್ತಿ ನ್ಯಾಯಾಲಯದಲ್ಲಿ ಇರುವುದಿಲ್ಲ. ಅಲ್ಲಿ ಒಂದು ಟೀ ಶರ್ಟ್ ಮತ್ತು ಪ್ಯಾಂಟ್ ಬದಲಾಯಿಸಿದ್ದರು. ಸದರಿ ಬಟ್ಟೆಗಳನ್ನು ನೋಡಿದರೇ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆದಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು ನ್ಯಾಯಾಲಯದ ಅನುಮತಿಯ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ಒಂದು ಕಪ್ಪು ಬಣ್ಣದ ಟ್ರ್ಯಾಕ್ ಪ್ಯಾಂಟ್ ಮತ್ತು ಗ್ರೇ ಬಣ್ಣದ ತುಂಬು ತೋಳಿನ ಟೀ ಶರ್ಟ ಇದ್ದು ಅವುಗಳನ್ನು **ಮುದ್ದೆ ಮಾಲು-5 ಮತ್ತು 6** ಮೂಲ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿಯು ಸದರಿ ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾರೆ.

3. ಪೊಲೀಸ್ ಠಾಣೆಯಲ್ಲಿದ್ದ ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

4. ನಾನು ದಿ.15.12.2022 ರಂದು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಆರೋಪಿ ಸಯ್ಯದ ಅಕ್ಮಲ್ ಇದ್ದು ಆತ ದಿ.13.12.2022 ರಂದು ರಾತ್ರಿ 9.00 ಗಂಟೆಗೆ 1 ನೇ ಆರೋಪಿಯ ಪ್ಯಾಸೆಂಜರ್ ಆಟೋದಲ್ಲಿ ಫಿರ್ಯಾಧಿಯನ್ನು ಕೊಲೆ ಮಾಡುವ ಉದ್ದೇಶದಿಂದ ಕೂರಿಸಿಕೊಂಡು ಬನ್ನಿಮಂಟಪ ಕೈಗಾರಿಕಾ ಪ್ರದೇಶದ ಬಳಿ ಕರೆದುಕೊಂಡು ಹೋಗಿ ಅಲ್ಲಿ ಆತನ ಮೇಲೆ ಹಲ್ಲೆ ಮಾಡಿರುವ ವಿಚಾರವನ್ನು ತಿಳಿಸಿ ಆ ದಿನ ಆತ ಧರಿಸಿದ ಬಟ್ಟೆಗಳನ್ನು ನಮ್ಮ ಸಮಕ್ಷಮ ಪೊಲೀಸರಿಗೆ ನೀಡಿದ್ದು, ಅವುಗಳನ್ನು ಪೊಲೀಸರು ಅಮಾನತ್ತು ಮಹಜರ್ ಜರುಗಿಸಿ ಪಡೆದುಕೊಂಡಿರುತ್ತಾರೆ. ಸದರಿ ಮಹಜರ್ ಕಾಲದಲ್ಲಿ ನಾನು ಸಾಕ್ಷಿದಾರರಾಗಿ ಹಾಜರಿದ್ದು ಮಹಜರ್ ಗೆ ಸಹಿ ಹಾಕಿರುತ್ತೇನೆ. ನನ್ನ ಸಮಕ್ಷಮ ಸದರಿ ಸಯ್ಯದ ಅಕ್ಮಲ್ ಘಟನೆಯ ದಿನ ಧರಿಸಿದ ಬಟ್ಟೆಗಳನ್ನು ಹಾಜರುಪಡಿಸಿರುತ್ತಾನೆ ಎಂದರೆ ಸಾಕ್ಷಿಯು ಬೇರೆ ವಿಚಾರ ತಿಳಿದಿರುವುದಿಲ್ಲ ಆದರೆ ಬಟ್ಟೆಗಳನ್ನು ಪೊಲೀಸರು ನನ್ನ ಸಮಕ್ಷಮ ಪಡೆದುಕೊಂಡಿರುತ್ತಾರೆ. ಸದರಿ ಮೇಲೆ ಹೇಳಿದ ವಿಚಾರಗಳನ್ನು ಸಯ್ಯದ ಅಕ್ಮಲ್ ಪೊಲೀಸರಿಗೆ ಮತ್ತು ನಮಗೆ ತಿಳಿಸಿರುತ್ತಾನೆ. ಆದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸಾಕ್ಷಿಗೆ 3 ನೇ ಆರೋಪಿಯನ್ನು ತೋರಿಸಿ ಠಾಣೆಯಲ್ಲಿ ಸದರಿ ಆರೋಪಿ ಇದ್ದರೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

6. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿತರ ಪರ ವಕೀಲರಿಂದಃ-**

3 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**